ನಾಮಕ್ಕಲ್‌ನಿಂದ ತಂಗಮಣಿಯು ಕ್ಲೀನರ್‌ನೊಂದಿಗೆ ಭಾರಿ ಸರಕಿನ ಲಾರಿ ಹತ್ತಿ ವಡಭಾರತದ ಕಡೆ ಪಯಣವಾದರೆ ಅವನು ತಿರುಗಿ ಹೊರಟ ಜಾಗವಿರಲಿ, ತಮಿಳುನಾಡಿನ ಗಡಿ ಮುಟ್ಟುತ್ತಿದ್ದುದೇ ಎರಡು ಮೂರು ತಿಂಗಳ ಮೇಲೆ. ಯಾವಾಗ ತಂಗಮಣಿ ಸರಕಿನ ಲಾರಿಯ ಮೇಲೆ ದೇಶ ಪರ್ಯಟನೆಗೈಯ್ಯುತ್ತ ನಾಮಕ್ಕಲ್‌ನೆಡೆ ಆಗಾಗ ಮುಖ ಮಾಡುತ್ತಿದ್ದನೋ ಅದಾಗ ಹೆಂಡತಿ ತಿರುಮೊಳಿ ಎಂಟು ವರ್ಷದ ಹೆಣ್ಣು ಕೂಸು ಕಣ್ಣಾಸೆಲ್ವಿಯನ್ನು ತಬ್ಬಿಕೊಂಡು ಸೀದ ಬಂದು ಶ್ರೀ ಮುರುಘನ್ ಇಂಟರ್‌ನ್ಯಾಷನಲ್ ಸರ್ವೀಸ್ ಟ್ರೇರ್ಸ್ ಕಂಪನಿ ಮ್ಯಾನೇಜರ್ ಅಳಗಿರಿ ಚೆಟ್ಟಿಯಾರರ ಕಾಲ ಬುಡದಲ್ಲಿ ಬಿದ್ದು, 'ಸಾಮಿಯೇ ನಿಮ್ಮ ವ್ಯಾಪಾರದ ಲಾರಿ ಮಾರ್ಗ ಪ್ರಯಾಣದಲ್ಲಿ ದೇಶ ದೇಶದ ಹಾದಿ ಬೀದಿಯ ಹೆಂಗಸರ ಸಹವಾಸ ಮಾಡಿ, ಸಿಕ್ಕಿದ ಸಂಬಳವನ್ನೆಲ್ಲ ಖರ್ಚು ಮಾಡಿ ಮನೆಗೆ ಎಂದೋ ಮುಖ ತೋರುವ ಗಂಡನ ಸಂಬಂಧ ಇರಲಿ ಇಲ್ಲದಿರಲಿ, ನನಗೆ ನಿಮ್ಮ ಲಾರಿ ಆಫೀಸಿನಲ್ಲಿ ಕಸ ಗುಡಿಸುವ ಕೆಲಸ ನೀಡುವ ವರೆಗೆ ಪಾದ ಬಿಡುವುದಿಲ್ಲ' ಅಂದಳು.

ಅಳಗಿರಿ ಚೆಟ್ಟಿಯಾರರು ಕೊಂಚ ಹೆದರಿದವರಂತೆ, ಇನ್ನೂ ಪ್ರಾಯವಿರುವ ಈ ಹೆಂಗಸಿಗೆ ಲಾರಿ ಆಫೀಸಿನಲ್ಲಿ ಕಸ ಗುಡಿಸುವ ಕಾಯಕ ಕೊಟ್ಟುಬಿಟ್ಟರೆ ತಾವೇ ದಿನ ಬೆಳಗೂ ಇವಳನ್ನು ತಮ್ಮ ಹತ್ತಾರು ಡ್ರೈವರು, ಕ್ಲೀನರುಗಳ ಕಣ್ಣಿಂದ ಕಾಯುತ್ತ ಕೂರಬೇಕಾಗುತ್ತದೆಂದುಕೊಂಡರು.

ನೂರಾರು ಲಾರಿಗಳು ನಿತ್ಯವೂ ದೇಶದ ಮೇಲೆಲ್ಲ ಹಾಯುವ, ವಾಪಸು ಬಂದು ಸೇರುವ ಅವರ ಲಾರಿ ಕಚೇರಿ ಮೈದಾನದಲ್ಲಿ ವಾಯಾಡಿ ಹೆಂಗಸರ ಸುಳಿವೇ ಇಲ್ಲ. ಅಷ್ಟೇ ಅಲ್ಲ ನಿತ್ಯವೂ ಅಷ್ಟು ಲೆಕ್ಕದ ಲಾರಿಗಳಲ್ಲಿ ಸಾಗಾಣೆಯಾಗುವ ಸರಕು ಏನೆಂಬುದು ಅದನ್ನು ಹೊತ್ತು ಲಾರಿಗೆ ಏರಿಸುವ ಕೂಲಿಯಾಳುಗಳಿಗೆ ತಿಳಿದಿಲ್ಲ, ಡ್ರೈವರುಗಳಿಗೂ ಗೊತ್ತಿಲ್ಲ. ಇಂಥ ವೇಳೆ ಲಾರಿ ಆಫೀಸಿನಲ್ಲಿ ಕೆಲಸ ಕೇಳಿ ಬಂದ ತಿರುಮೊಳಿಯ ಅಹವಾಲನ್ನು ಕೇಳಿಸಿಕೊಂಡ ಅಳಗಿರಿಯವರು ಈ ಹೆಂಗಸನ್ನು ದೂರ ಕಳಿಸುವುದೇ ಮಾರ್ಗೋಪಾಯವೆಂದು ತಿಳಿದು, ಮುನಿಸಿಪಾಲಿಟಿಯ ಸದಸ್ಯರೊಬ್ಬರನ್ನು ಹಿಡಿದು ಊರಾಚೆಯ ಸ್ಮಶಾನದಲ್ಲಿ ಹೆಣ ಸುಡುವ, ಹೂಳುವ ಕೆಲಸಕ್ಕೆ ಹಾಕಿಸಿದರು. ಹಾಗೆಯೇ ಅವಳ ಸಹಾಯಕ್ಕೆ ತಂಗಮಣಿಯ ಗೆಳೆಯನಾದ ಕೊಂಗುನಾದನನ್ನು ಸ್ಮಶಾನದ ಒಬ್ಬಂಟಿ ಹೆಂಗಸಿನ ಸಹಾಯಕ್ಕೆಂದು ಕಳಿಸಿದರು.

ತಂಗಮಣಿ ಕೃಷ್ಣಗಿರಿಯಲ್ಲಿ ತಮಿಳು ಎಂಟನೇ ತರಗತಿ ಪಾಸು ಮಾಡಿ, ಅಲ್ಲಿಂದಾಚೆ ಎಲ್ಲೊ ಇದ್ದ ಇಂಗ್ಲಿಷ್ ಶಾಲೆಗೆ ಹೋಗುತ್ತೇನೆಂದರೆ, ಅಪ್ಪನು, 'ಪಡಿಕ್ಕಿರದುಕ್ಕು ನೀ ಎನ್ನ ಪಣಕ್ಕಾರ ಪಯ್ಯನಡಾ, ಇರಕ್ಕರ ವೇಲೆ ಪಾರಡಾ' ಎಂದು ಗದರಿಬಿಟ್ಟನು. ಇರುವ ವೇಲೆ ಎಂದರೆ ಯಾವುದು? ಅಪ್ಪನಿಗೇ ಕೂಲಿ ಬಿಟ್ಟು ಯಾವ ಕೆಲಸವೂ ಗತಿ ಇಲ್ಲದ್ದರಿಂದ ತಂಗಮಣಿ ಏನು ಕಾಯಕ ಮಾಡುವುದೋ ಅದೇ ಗೊತ್ತಾಗಲಿಲ್ಲ. ಹೀಗಾಗಿ ವಯೋಮಾನ ಇಪ್ಪತ್ತೈದರ ವರೆಗೆ ತಂಗಮಣಿ ಯಾವ್ಯಾವ ನೌಕರಿಯ ಮೇಲೆ ಬೆಳೆದನೋ ಅವನಿಗೇ ಸರಿಯಾಗಿ ಗೊತ್ತಿಲ್ಲ. ಈ ಮಧ್ಯೆ ಮದುವೆಯಾಗಿ ತಂಗಮಣಿ ಕೃಷ್ಣಗಿರಿಯಿಂದ ನಾಮಕ್ಕಲ್‌ಗೆ ಉದ್ಯೋಗ ನಿಮಿತ್ತ ಹೆಂಡತಿ ಕೂಸಿನೊಡನೆ ವಲಸೆ ಬರುವಲ್ಲಿ, ಪಕ್ಕತ್ತು ವೀಟ್ಟು ಕೊಂಗುನಾದನೂ ಬಂದುಬಿಟ್ಟ.

ತಂಗಮಣಿ ವಡಭಾರತ ಇಲ್ಲಾ ತೆನ್‌ಭಾರತದ ಕಡೆ ಪಯಣಗೈಯ್ಯುವವನಾದರೆ ಇತ್ತ ಲಾರಿ ಯಾರ್ಡಿನಲ್ಲೇ ಕೊಂಗು ಮಾಡುತ್ತಿದ್ದುದು ನಿತ್ಯವೂ ದೇಶ ಸುತ್ತಿ ಬರುವ ಲಾರಿ ತೊಳೆಯುವ ಕೆಲಸ. ಒಂದು ವರ್ಷದ ಕೂಸಾಗಿದ್ದಾಗ ಅವರಪ್ಪನ ನಡುವಿಂದ ಅಕಸ್ಮಾತ್ ಬಿದ್ದು ತಲೆಗೆ ಏಟಾದುದರಿಂದಲೋ, ಇಲ್ಲ ಗರ್ಭದಿಂದ ಬಿದ್ದಲಾಗಾಯ್ತಿನಿಂದಲೇ ಅವನಿಗೆ ಹಾಗೆ